ಈ ರೀತಿ ಫೋರ್ಜರಿಯಾಗಿರುವ ಕಾಗದಪತ್ರಗಳ ಮೂಲಕ ಯಾವುದಾದರೂ ಹಕ್ಕುಬಾಧ್ಯತೆ ಮಾಡತಕ್ಕದ್ದು ಅಥವಾ ಅಲ್ಲಿ ಸ್ವಾಧೀನದಲ್ಲಿರುವ ನಿರಪರಾಧಿಗಳನ್ನು ಒಕ್ಕಲೆಬ್ಬಿಸುವ ಪ್ರಯತ್ನ ಮಾಡುವುದಾದರೆ ಅದನ್ನು ತಡೆಯಲೂ ಸಹ ನಾನು ಆದೇಶ ಮಾಡಿಸುತ್ತೇನೆ.

*(ಓ) ಶಾಲಾ ಮಕ್ಕಳಿಗೆ ಪಡಿತರ ವಿತರಣೆಯಲ್ಲಿ ಅವ್ಯವಹಾರ*

**ಶ್ರೀ ಎ. ನಾರಾಯಣಸ್ವಾಮಿ** (ಆನೇಕಲ್) : ಅಧ್ಯಕ್ಷರೇ, ಶಾಲಾಮಕ್ಕಳಿಗೆ ಪಡಿತರ ನೀಡುವಲ್ಲಿ ನಡೆಯುತ್ತಿರುವ ಅವ್ಯವಹಾರದ ಬಗ್ಗೆ ಸರ್ಕಾರದ ಗಮನ ಸೆಳೆಯಲು ಇಚ್ಛಿಪಡುತ್ತೇನೆ. ಶಾಲಾಮಕ್ಕಳಿಗೇನು ಉಚಿತ ಅಕ್ಕಿ ನೀಡುತ್ತೀರಿ. ಆ ಅಕ್ಕಿಯನ್ನು ಆ ಮಕ್ಕಳಿಗೆ ಕೊಡುವುದೇ ಇಲ್ಲ. ಎರಡು ಮೂರು ತಿಂಗಳು ಕೊಡದಿರುವ ನ್ಯಾಯಬೆಲೆ ಅಂಗಡಿಗಳಿಗೆ ಸರ್ಕಾರ ರಕ್ಷಣೆ ನೀಡುತ್ತಿದ್ದಾರೆಂದರೆ ಜನಸಾಮಾನ್ಯರು ಏನು ಮಾಡಬೇಕು ಎನ್ನುವ ಬಗ್ಗೆ ಸರ್ಕಾರ ಸರಿಯಾದ ಉತ್ತರ ಕೊಡಬೇಕಾಗಿದೆ. ಅದಕ್ಕೆ ಕಾರಣವೇನೆಂದರೆ, ನನ್ನ ಕ್ಷೇತ್ರದಲ್ಲಿ ಬೆಂಡಿಗಾನಹಳ್ಳಿ ಎಂಬ ಗ್ರಾಮವಿದೆ. ಅಲ್ಲಿನ ನ್ಯಾಯಬೆಲೆ ಅಂಗಡಿಯಲ್ಲಿ ಶಾಲಾಮಕ್ಕಳಿಗೆ ಯಾವ ಅಕ್ಕಿಯನ್ನೂ ನೀಡಲಿಲ್ಲವೆಂದು ಫುಡ್ ಅಸಿಸ್ಟೆಂಟ್ ವರದಿ ಹಾಕಿದ್ದರೂ ಸಹ ಸಸ್ಪೆಂಡ್ ಮಾಡಿದ್ದಕ್ಕೆ ಸರ್ಕಾರವೇ ಸ್ಟೇ ಕೊಟ್ಟಿದೆ. ಇಂಥ ವ್ಯವಸ್ಥೆ ಬಗ್ಗೆ ಸರ್ಕಾರ ಗಮನಹರಿಸಬೇಕು. ಅದರ ಜೊತೆಗೆ ನಮ್ಮಲ್ಲಿ ಇನ್ನೊಂದು ವ್ಯವಸ್ಥೆ ಇದೆ. ನಾನು ಹಳ್ಳಿಗಳ ಮೇಲೆ ಹೋಗುತ್ತಾ ಇದ್ದೆ. ಶಾಲಾ ಮಕ್ಕಳು ಎರಡು ಮೈಲಿ ನಡೆದುಕೊಂಡು ಹೋಗುತ್ತಿದ್ದರು. ಎಲ್ಲಿಗಪ್ಪ ನಡೆಸಿಕೊಂಡು ಹೋಗುತ್ತಿದ್ದೀರಿ ಎಂದು ಟೀಚರನ್ನು ಕೇಳಿದೆ. ಸ್ವಾಮಿ ಅಕ್ಕಿ ಕೊಡಿಸಬೇಕು, ಅದಕ್ಕೇ ನಡೆಸಿಕೊಂಡು ಹೋಗುತ್ತಿದ್ದೇನೆ ಅಂದರು. ತಿಂಗಳಿಗೊಂದು ಸಲ ಮಧ್ಯಾಹ್ನ ಶಾಲೆಗೆ ರಜೆ ಕೊಟ್ಟು ಮಕ್ಕಳನ್ನು ಎರಡು ಮೈಲಿ ನಡೆಸಿಕೊಂಡು ಹೋಗಬೇಕು ಅಂದರು. ಪ್ರತಿ ಪ್ರಾಥಮಿಕ ಶಾಲಾ ಮಗು ಪ್ರತಿ ತಿಂಗಳು ನ್ಯಾಯಬೆಲೆ ಅಂಗಡಿ ಮುಂದೆ ಕ್ಯೂ ನಿಂತುಕೊಳ್ಳಬೇಕು : ಜೋಳಿಗೆ ಹಿಡಿದುಕೊಂಡು. ನನಗೊಂದು ಅನುಮಾನ ಬಂದುಬಿಟ್ಟಿದೆ : ನಮ್ಮ ಮಕ್ಕಳನ್ನು ಶಾಲೆಗೆ ಸೇರಿಸಬೇಕಾದರೆ ಮೊದಲು ಜೋಳಿಗೆ ತೆಗೆಯಬೇಕಾ, ಪುಸ್ತಕ ತೆಗೆಯಬೇಕಾ ? ಜೋಳಿಗೆ ಸಮೇತ ಮಕ್ಕಳು ಎರಡು ಮೂರು ಮೈಲಿಗಳು ನಡೆಯುವುದನ್ನು ತಪ್ಪಿಸುವ ಬಗ್ಗೆ ಸರ್ಕಾರ ಗಮನಹರಿಸಿ ಪರ್ಯಾಯ ವ್ಯವಸ್ಥೆ ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ.

**ಶ್ರೀ ಹೆಚ್. ಜಿ. ಗೋವಿಂದಗೌಡ** (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) : ಶಾಲಾ ಮಕ್ಕಳಿಗೆ ಉಚಿತವಾಗಿ ತಿಂಗಳಿಗೆ 3 ಕೆ.ಜಿ. ಅಕ್ಕಿ ಅಥವಾ ಗೋಧಿ ನೀಡುವ ಕಾರ್ಯಕ್ರಮವಿದೆ. ಶಾಲಾ ಹಾಜರಾತಿಯನ್ನು ಹೆಚ್ಚಿಸುವ ಸಲುವಾಗಿ ಕೇಂದ್ರ ಸರ್ಕಾರ ನೀಡುವ ಉಚಿತ ಅಕ್ಕಿ ಹಾಗೂ ಗೋಧಿಯನ್ನು ಹಂಚುವ ವ್ಯವಸ್ಥೆ ಇದು. ಇದಕ್ಕೆ ವಿದ್ಯಾರ್ಥಿಯ ಶೇ. 80 ಹಾಜರಾತಿ ಅಗತ್ಯ. ಈ ಬಗ್ಗೆ ಅವ್ಯವಹಾರ ಆಗದಂತೆ ಎಲ್ಲಾ ಬಿಗಿಕ್ರಮ ತೆಗೆದುಕೊಳ್ಳಲಾಗಿದೆ. ನ್ಯಾಯ ಬೆಲೆ ಅಂಗಡಿಗಳಲ್ಲಿ ಒಂದು ನಿರ್ದಿಷ್ಟ ದಿನಗಳಲ್ಲಿ ಶಾಲೆ ಮಕ್ಕಳನ್ನು ಕರೆದುಕೊಂಡು ಅಧ್ಯಾಪಕರ ಸಮ್ಮುಖದಲ್ಲಿ ಹಂಚಲಾಗುತ್ತಿದೆ. ಎಲ್ಲಾದರೂ ಈ ಬಗ್ಗೆ ದೂರು ಬಂದರೆ ಜಿಲ್ಲಾಧಿಕಾರಿಗಳ ಮೂಲಕ ತನಿಖೆ ನಡೆಸಿ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಶಾಸಕರು ಎಲ್ಲಿ ಅವ್ಯವಹಾರ ನಡೆದಿದೆ ಎಂದು ನಿರ್ದಿಷ್ಟವಾಗಿ ತಿಳಿಸಿದಲ್ಲಿ ಕೂಡಲೇ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗುವುದು. ಯಾವ ರೀತಿ ಇದನ್ನು ಅಕ್ಕಿ ಹಂಚುವುದನ್ನು ಮಾಡೋಣ? ಒಂದು ವೇಳೆ ಉಪಾಧ್ಯಾಯರಿಗೆ ಅಕ್ಕಿ ಹಂಚಲು ಹೇಳಿದರೆ ಕೆಲವು

ಉಪಾಧ್ಯಾಯರು ಹಂಚುವುದೇ ಇಲ್ಲ. ಒಂದು ವೇಳೆ ಅಧಿಕಾರಿಗಳಿಗೆ ನೀವು ಹಂಚಿ ಎಂದರೂ ಅಲ್ಲೂ ಸರಿಯಾದ ವ್ಯವಸ್ಥೆ ಆಗುತ್ತಿಲ್ಲ. ಇದನ್ನು ಯೋಚಿಸಿ ಮಕ್ಕಳನ್ನೇ ಅಲ್ಲಿಗೆ ನೇರವಾಗಿ ಸಿಕ್ಕಲಿ ಎಂಬ ಉದ್ದೇಶದಿಂದಲೇ ಈ ಕಾರ್ಯಕ್ರಮವನ್ನು ನಾನು ಮಾಡಿರುವುದು. ನಮ್ಮ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಮಕ್ಕಳಲ್ಲಿ ಹೆಚ್ಚು ಭಾಗ ಬಡ ಮಕ್ಕಳೇ, ಸ್ವಲ್ಪ ಭಾಗ ಮಧ್ಯಮವರ್ಗದ ಮಕ್ಕಳೂ ಬರುತ್ತಾರೆ. ಆ ಮಕ್ಕಳ ತಂದೆತಾಯಿಗಳಿಗೆ ಅಕ್ಕಿ ತಲುಪಲಿ ಎಂಬ ಒಂದೇ ಉದ್ದೇಶದಿಂದ ಮಕ್ಕಳಿಗೆ ಕೊಡುತ್ತಿರುವುದು. ಆದರೆ ಮಕ್ಕಳಿಗೆ ಹೋಗುವುದು ದೂರ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇನ್ನು ಯಾವ ಸಿಸ್ಟಂ ಮಾಡಬಹುದು ಎಂಬುದನ್ನು ದಯವಿಟ್ಟು ಹೇಳಿ. ಯಾವುದೇ ರೀತಿಯಲ್ಲಿ ಈ ಅಕ್ಕಿ ಬೇರೆಯವರ ಕೈಗೆ ಹೋಗಬಾರದು. ಅನೇಕ ಕಡೆ ಇವತ್ತು ಅನ್ನ ಊಟಮಾಡುವುದಿಲ್ಲ. ಅಕ್ಕಿ ತಿನ್ನುವ ಅಧಿಕಾರಿಗಳು ಉಪಾಧ್ಯಾಯರುಗಳು ನ್ಯಾಯಬೆಲೆ ಅಂಗಡಿಯ ಜನಗಳೂ ಇದ್ದಾರೆ. ಮಕ್ಕಳು ಜೋಳಿಗೆ ಹಿಡಿದು ಹೋಗುತ್ತಾರೆ ಎಂದು ಹೇಳಿದರು. ಮಕ್ಕಳು ಸ್ವಲ್ಪ ದೂರ ನಡೆಯಲಿ. ಏನೇ ಮಾಡಿದರೂ ಈ ದೇಶದಲ್ಲಿ ಏನೇ ಮಾಡಿದರೂ ಕ್ರಿಟಿಸಿಸಂ ಇಲ್ಲ ಅಂತಿಲ್ಲ. ಒಂದೊಂದು ಸಲ ಉಪಾಧ್ಯಾಯರಿಗೆ ಅಕ್ಕಿ ಹಂಚಲು ಹೇಳಿದರೆ ಎರಡೆರಡು ತಿಂಗಳು ಅಕ್ಕಿಯನ್ನೆ ಹಂಚಿಲ್ಲ

12.40 ಪಿ.ಎಂ.

ಆರು ಕೆ.ಜಿ. ಯನ್ನು ಉಪಾಧ್ಯಾಯರುಗಳೇ ಇಟ್ಟುಕೊಂಡಿರುವ ಬಗ್ಗೆಯೂ ಒಂದೊಂದು ಸಲ ಗಮನಕ್ಕೆ ಬರುತ್ತದೆ. ಒಂದೊಂದು ಸಾರಿ ನೀವೇ ಹಂಚಿ ಎಂದರೂ ಅವರು ಹಂಚುವುದಿಲ್ಲ. ಅವರೂ ಸಹ ಅದನ್ನು ಇಟ್ಟುಕೊಳ್ಳುತ್ತಾರೆ. ಹೀಗೆಲ್ಲಾ ಆಗದ ರೀತಿಯಲ್ಲಿ ಮಕ್ಕಳು ಹೋಗಿ ನೇರವಾಗಿ ತೆಗೆದುಕೊಳ್ಳಿ ಎಂದು ಈ ಕಾರ್ಯಕ್ರಮವನ್ನು ಇಟ್ಟಿದ್ದೇವೆ. ದಯವಿಟ್ಟು ನಾರಾಯಣಸ್ವಾಮಿಯವರು ಏನು ಮಾಡಬಹುದು ಎಂದು ಹೇಳಿ ಒಂದು ಸಲಹೆ ಕೊಟ್ಟರೆ ಅದು ನ್ಯಾಯವಾಗಿದ್ದರೆ ಖಂಡಿತಾ ಮಾಡುತ್ತೇನೆ. ಖಂಡಿತಾ ಇದರ ಬಗ್ಗೆ ನನಗೂ ನೋವು ಇದೆ. ಇದನ್ನು ಯಾವ ರೀತಿ ಮಾಡಬೇಕು ಏನಾಗಬೇಕು ಎನ್ನುವುದು ಗೊತ್ತಾಗುತ್ತದೆ. ಆದರೆ ಈ ರೀತಿಯಲ್ಲಿ ಅನ್ಯಾಯವಾಗದ ಹಾಗೆ ಮಕ್ಕಳಿಗೆ ಅಕ್ಕಿ ಸಿಗಲಿ ಎನ್ನುವ ಒಂದೇ ಒಂದು ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಇವತ್ತು ಕೇಂದ್ರದಿಂದ ಬರುವ ಸವಲತ್ತು ಇದು. ಕೇಂದ್ರದಿಂದ ಬರುವ ಸವಲತ್ತು ನೇರವಾಗಿ ಮಕ್ಕಳಿಗೆ ದೊರೆಯಲಿ ಎನ್ನುವ ಭಾವನೆಯಿಂದ ಈ ಕಾರ್ಯಕ್ರಮವನ್ನು ಮಾಡಿದ್ದೇವೆ. ನಾನು 28 ಜಿಲ್ಲೆಯಲ್ಲಿ ಪ್ರವಾಸ ಮಾಡಿ ನೋಡಿದಾಗ ಅಕ್ಕಿ ಸರಿಯಾದ ರೀತಿಯಲ್ಲಿ ವಿಲೇವಾರಿ ಆಗದೇ ಇರುವುದನ್ನು ನೋಡಿದ್ದೇನೆ. ಕಾನೂನಿನ ಪ್ರಕಾರ ಏನು ಕಾರ್ಯಕ್ರಮ ಕೈಗೊಳ್ಳಬಹುದೋ ಅದನ್ನು ಮಾಡುತ್ತೇವೆ. ಕೂಡಲೇ ಜಿಲ್ಲಾಧಿಕಾರಿಗಳಿಗೂ ಹೇಳುತ್ತೇವೆ. ನಮ್ಮ ಫುಡ್ ಅಸಿಸ್ಟೆಂಟ್‌ಗೆ ಹೇಳುತ್ತೇವೆ. ನಮ್ಮ ಬಿ.ಓ. ಗಳು ನೇರವಾಗಿ ನೀವು ಹಳ್ಳಿ ಹಳ್ಳಿಗಳಿಗೆ ಹೋಗಿ ಯಾರ್ಯಾರಿಗೆ ಅಕ್ಕಿ ಕೊಟ್ಟಿಲ್ಲ, ಯಾರಿಗೆ ಸಿಕ್ಕಿಲ್ಲ, ಇದನ್ನು ಕೂಡ ರಿಪೋರ್ಟ್ ಮಾಡಬೇಕೆಂದು ಹೇಳಿ ಎಲ್ಲಾ ಮಾಡಿದ್ದೇವೆ. ದಯವಿಟ್ಟು ನೀವು ಸಹಕರಿಸಬೇಕು. ಎಲ್ಲಿ ಏನಾಗಿದೆ ಎಂದು ನಮಗೆ ನೇರವಾಗಿ ತಿಳಿಸಿ. ನಮಗೆ ಯಾವ ಹಂಗೂ ಇರುವುದಿಲ್ಲ. ಮಕ್ಕಳಿಗೆ ಸಿಗುವ ಅಕ್ಕಿ ನೇರವಾಗಿ ಸಿಗಬೇಕು ಎನ್ನುವ ಒಂದೇ ಉದ್ದೇಶದಿಂದ ಇದನ್ನು ಮಾಡಿದ್ದೇವೆ ಇದರ ಬಗ್ಗೆ ಏನಾದರೂ ಇದ್ದರೆ ಸಲಹೆ ಕೊಡಿ.

**ಶ್ರೀ ಡಿ. ವಿ. ಸದಾನಂದಗೌಡ :** ಪ್ರತಿ ಶಾಲೆಗಳಲ್ಲಿ ಅಕ್ಕಿಯನ್ನು ತಿಂಗಳಿಗೊಮ್ಮೆ ವಿತರಣೆ ಮಾಡುವ ಬಗ್ಗೆ ಏನಾದರೂ ಪ್ರಯತ್ನಗಳನ್ನು ಮಾಡಲಿಕ್ಕೆ ಸಾಧ್ಯ ಇದೆಯಾ ?

**ಶ್ರೀ ಹೆಚ್. ಜಿ. ಗೋವಿಂದೇಗೌಡ :** ಅಕ್ಕಿ ಹಂಚುವ ಕಾರ್ಯಕ್ರಮ ನೇರವಾಗಿ ನಮ್ಮ ಇಲಾಖೆಗೆ ಸಂಬಂಧಪಟ್ಟಿಲ್ಲ. ಡೆಪ್ಯುಟಿ ಕಮೀಷನರ್ ಇಲ್ಲಿಂದ ಕೆ.ಎಫ್.ಸಿ. ಯಿಂದ ತರಿಸಿ ಅಲ್ಲಿಂದ ಫೇರ್ ಪ್ರೈಸ್ ಷಾಪ್‌ಗೆ ಕಳುಹಿಸುವ ಜವಾಬ್ದಾರಿ ಎಲ್ಲಾ ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟಿರುವುದು. ಅಲ್ಲಿಂದ ಬಿಡಿಸಿಕೊಳ್ಳಬೇಕು. ಅಲ್ಲಿಂದ ತರಬೇಕು. ಆಮೇಲೆ ತಾಲ್ಲೂಕು ಪಂಚಾಯಿತಿ, ತಾಲ್ಲೂಕು ಟಿಎಪಿಸಿಎಂಎಸ್ ಯಾವುದ್ಯಾವುದು ಹೋಲ್‌ಸೇಲ್ ಏಜೆನ್ಸಿ ಇದೆ. ಅವರ ಮುಖಾಂತರ ಹಳ್ಳಿಗಳಲ್ಲಿ ಎಲ್ಲೆಲ್ಲಿ ನ್ಯಾಯಬೆಲೆ ಅಂಗಡಿಗಳಿವೆ, ಅಲ್ಲಿ ಹಂಚುವ ವ್ಯವಸ್ಥೆ ಅವರದು. ಅಲ್ಲಿಗೆ ಬಂದಮೇಲೆ ನಮ್ಮ ಇಲಾಖೆಯವರು ಅಕ್ಕಿ ಹಂಚುವುದು. ಮಕ್ಕಳಿಗೆ ಅಕ್ಕಿ ಕೊಡುವುದು ನಮ್ಮ ಇಲಾಖೆಗೆ ಸಂಬಂಧಪಟ್ಟಿರುವುದು. ಕೇಂದ್ರ ಸರ್ಕಾರದಿಂದ ಬರುವ ಸವಲತ್ತು ಏನಿದೆ, ಅದನ್ನೆಲ್ಲಾ ಉಪಯೋಗಿಸಿಕೊಂಡು ನಾವು ಯಾವುದೇ ರೀತಿ ಅನ್ಯಾಯವಾಗದ ಹಾಗೆ ಮಾಡುತ್ತಿದ್ದೇವೆ. ಆದರೆ ಶಾಲೆಗಳಲ್ಲಿಯೇ ಹಂಚುವ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ.

**ಶ್ರೀ ಎ. ನಾರಾಯಣಸ್ವಾಮಿ :** ರೇಷನ್ ಕಾರ್ಡ್‌ಗೆ ಅಟ್ಯಾಚ್‌ಮೆಂಟ್ ಮಾಡಿಕೊಟ್ಟರೆ ಉಪಯೋಗವಾಗುತ್ತದೆ. ಆಗ ಮಕ್ಕಳ ತಂದೆತಾಯಿಗಳೇ ಅದನ್ನು ತೆಗೆದುಕೊಳ್ಳುತ್ತಾರೆ. ಆ ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು.

**ಶ್ರೀ ಹೆಚ್. ಜಿ. ಗೋವಿಂದೇಗೌಡ :** ಉತ್ತರವನ್ನು ಈಗಾಗಲೇ ಹೇಳಿದ್ದೇನೆ.

*(೫) ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಮಂಗನ ಖಾಯಿಲೆ ಕಾಣಿಸಿಕೊಂಡಿರುವುದು*

**ಶ್ರೀ ಎಸ್. ಅಂಗಾರ್ :** ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನಸಭಾ ಕ್ಷೇತ್ರದ ಸುಳ್ಯ ತಾಲ್ಲೂಕಿನ ಬಳ್ಪ ಗ್ರಾಮದ ಬೀದಿಗುಡ್ಡೆ ಎಂಬಲ್ಲಿ ಮಂಗನ ಖಾಯಿಲೆ ಕಾಣಿಸಿದ್ದು ಗ್ರಾಮಸ್ಥರು ಜ್ವರಕ್ಕೆ ತುತ್ತಾಗಿ ಈಗಾಗಲೇ ಈ ಜ್ವರದಿಂದ ವಾಂತಿ, ತಲೆನೋವು ಶುರುವಾಗಿ ನಿಶಕ್ತಿ ಕಡಿಮೆಯಾಗಿ ಈಗಾಗಲೇ ಸುಬ್ರಹ್ಮಣ್ಯ ಗ್ರಾಮದ ಅರುಗುಡಿ ಎಂಬಲ್ಲಿ ವಾಸಿಸುತ್ತಿರುವ ಸೀತಮ್ಮ ಎಂಬುವರು ಮೃತಪಟ್ಟಿದ್ದಾರೆ. ಈ ಖಾಯಿಲೆ ಮಂಗನ ಖಾಯಿಲೆ ಎಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಂದ ತಿಳಿದುಬಂದಿದೆ. ಸಂಬಂಧಪಟ್ಟ ಜಿಲ್ಲಾ ವೈದ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಒಂದು ವಾರ ಕಳೆದರೂ ಈ ಮಂಗನ ಖಾಯಿಲೆಯನ್ನು ತಡೆಗಟ್ಟುವಲ್ಲಿ ಸಂಬಂಧಪಟ್ಟ ಚುಚ್ಚುಮದ್ದು ಏನು ಇದೆ, ಅದನ್ನು ಈವರೆಗೆ ಯಾವುದೇ ಆಸ್ಪತ್ರೆಗೆ ಒದಗಿಸಿಲ್ಲ. ಈ ಗ್ರಾಮದಲ್ಲಿ ವಾಸಿಸುತ್ತಿರುವ ಜನಗಳು ಹೆಚ್ಚಾಗಿ ಕಡುಬಡುವರು ಹಾಗೂ ಮಧ್ಯಮ ವರ್ಗದ ಜನಗಳು. ಇವರು ಖಾಸಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆಯುವ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಸಂಬಂಧಪಟ್ಟ ರೋಗವನ್ನು ಅವಶ್ಯಕವಿರುವಂಥ ಚುಚ್ಚುಮದ್ದು ಹಾಗೂ ರೋಗವನ್ನು ಪತ್ತೆ ಮಾಡಬೇಕಾದರೆ ರಕ್ತ ಪರೀಕ್ಷೆಗಾಗಿ ಸಂಬಂಧಪಟ್ಟ ರಕ್ತವನ್ನು ಶಿವಮೊಗ್ಗಕ್ಕೆ ಕಳುಹಿಸಿ ಬರಲು ತುಂಬಾ ತಡವಾಗುವುದರಿಂದ ಸಂಬಂಧಪಟ್ಟ ಎಲ್ಲಾ ಔಷಧಿಗಳನ್ನು ತಕ್ಷಣ ಒದಗಿಸಬೇಕು. ಮತ್ತು ಜನರು ಭಯಭೀತರಾಗಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಆರೋಗ್ಯ ಸಚಿವರು ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.